

ಸುಳ್ಳುಗಳೇ ಕರಗತವಾಗದೆ ನೀನು ಕವಿಯಾಗಿದ್ದಾದರೂ
ಹೇಗೆ

ಬರೆಯಬೇಕಿತ್ತು ನೀನು
ಹೆದ್ದಾರಿಯ ಮಗ್ಗುಲ ಹಳೆಯ ಶೆಡ್ಡುಗಳಲ್ಲಿ ಕನಸುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ
ಸತ್ಯ ನುಡಿಯುವವರು ನಿರ್ಭಯವಾಗಿ ಬೀದಿಯಲ್ಲೂ ನಿದ್ರಿಸಬಹುದು
ಬಡವರನ್ನು ಹುಡುಕಿಕೊಟ್ಟವರಿಗೆ ಸೂಕ್ತ ಬಹುಮಾನ
ಇಲ್ಲಿ ಯಾವ ಕಲೆಯೂ ನಿಷೇಧಕ್ಕೆ ಒಳಗಾಗುವುದಿಲ್ಲ
ಹೀಗೆ ಸಾಲು ಸಾಲು ಸುಳ್ಳಿನ ಕವಿತೆಗಳನ್ನು

ಮೆತ್ತನೆಯ ಹಾಸಿಗೆಯಲ್ಲಿ ನಿದ್ರಿಸಿ ಎದ್ದವರಿಗೆ ಪ್ರಿಯವಾದ ಸುಳ್ಳುಗಳ ಅಗತ್ಯವಿದೆ

ಅವಿವೇಕಿಯಂತೆ ಲೋಕದ ಅಸಲಿಯತ್ತುಗಳನ್ನೇ ಬರೆದ ನೀನು
ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡೆ
ಗೊತ್ತಿರಲಿ
ಒಳ್ಳೆಯ ಕವಿಯಾದರೂ ಇಲ್ಲಿ ನೀನು ಯಾರಿಗೂ ಪ್ರಿಯವಲ್ಲ



## ಪ್ರಶ್ನೆ

ಈ ನಡುವೆ
ಮರಗಳಿಗೆ ಇರುವುದು ಅದೊಂದೇ ಪ್ರಶ್ನೆ
ಈ ಮನುಷ್ಯ
ಚೂಪು ಕೊಡಲಿಗಳಿಂದ
ನಮ್ಮ ಕೊರಳು ಕತ್ತರಿಸುತ್ತಾನೆ
ನಡುವನ್ನೇ ತುಂಡು ಮಾಡುತ್ತಾನೆ
ಮೈ ಸೀಳುತ್ತಾನೆ
ಕಡೆಗೆ
ಪಾಪ ವಿಮೋಚನೆ ಎನ್ನುವಂತೆ
ಹತ್ತಾರೂ ಶಿಲುಬೆಗಳನ್ನೂ ತಯಾರಿಸುತ್ತಾನೆ
ಆದರೆ
ಶಿಲುಬೆ ತಯಾರಿಸುವ ಮನುಷ್ಯ
ತಾನು ಮಾತ್ರ ಕ್ರಿಸ್ತನಾಗಲು ಹೆದರುವುದು ಏಕೆ?

